ಈ ಇಲ್ಲಾ, ಉತ್ಪಾಧನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಸಂಶೋಧನೆಯ ಫಲಗಳನ್ನು ಅಳವಡಿಸಲಾಗುತ್ತಿದೆ ಇದಕ್ಕಾಗಿ, ಹೊಸ ತಳಿಗಳ ಪ್ರಯೋಗ ತಾಕುಗಳೊಂದಿಗೆ ಪೂರ್ಣಮಟ್ಟದ ಪ್ರಾತ್ಯಕ್ಷಿಕೆಗಳನ್ನು ಸಹ ಏರ್ಪಸಲಾಗುತ್ತಿದೆ

198 (397) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಆಹಾರ ನಾಗರಿಕ ಸರವರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಮಲೆನಾಡಿನ (ಶಿವಮೊಗ್ಗ ಜಿಲ್ಲೆ) ಹೊಸನಗರ, ಸಾಗರ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ LPG ಸಂಪರ್ಕವಿರುವವರಿಗೆ ಪಡಿತರ ಸೀಮೆ ಎಣ್ಣೆಯನ್ನು ಏಕೆ ವಿತರಿಸಲಾಗುತ್ತಿಲ್ಲ,

ಆ) ಮಲೆನಾಡಿನ ಮೇಲ್ಕಂಡ ತಾಲ್ಲೂಕುಗಳಲ್ಲಿ ಪಡಿತರ ಸೀಮೆಎಣ್ಣೆ ಅಡಿಗೆ ಬಳಕೆಗಿಂತ ಬೆಳಕಿಗೆ ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಮೇಲ್ಕಂಡ ತಾಲ್ಲೂಕುಗಳಲ್ಲಿ ಬೆಳಕಿಗಾಗಿ ಸೀಮೆಎಣ್ಣೆ ಕೊಡಲು ಇರುವ ತೊಂದರೆಗಳೇನು?

ಶ್ರೀ ಗೋವಿಂದ ಎಂ ಕಾರಜೋಳ

ಅ) ಅನಿಲ ಸಂಪರ್ಕ ಹೊಂದಿರುವವರು ಸಿಲಿಂಡರು ಉಪಯೋಗಿಸುವ ಮೂಲಕ ಸರ್ಕಾರದ ಸಹಾಯಧನ ಸೌಲಭ್ಯ ಪಡೆಯುತ್ತಿರುವುದರಿಂದ ಸೀಮೆಎಣ್ಣೆಗೂ ಸಹ ಸಹಾಯಧನಯುಕ್ತ ಪದಾರ್ಥ ಆಗಿರುವುದರಿಂದ ಒಬ್ಬನೇ ವ್ಯಕ್ತಿ ಎರಡು ಯೋಜನೆಗಳ ಸಹಾಯಧನ ಪಡೆಯುವುದು ಸಮಂಜಸವಲ್ಲ ಜೊತೆಗೆ ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಮಂತ್ರಾಲಯದ ದಿನಾಂಕ 28 2 1997ರ ನಿರ್ದೇಶನದಂತೆ ಸಾರ್ವಜನಿಕ ವಿತರಣಾ ಪದ್ಧತಿಯ ಸೀಮೆಎಣ್ಣೆಯನ್ನು

ಎಲ್ ಪಿ ಜಿ ಸಂಪರ್ಕ ಹೊಂದಿರುವವರಿಗೆ ನೀಡದಿರಲು ಸೂಚಿಸಲಾ ಗಿರುತ್ತದೆ ಅದರಂತೆ ರಾಜ್ಯದಾದ್ಯಂತ ಏಕರೂಪವಾಗಿ ಅನಿಲ ಸಂಪರ್ಕ ಹೊಂದಿರುವವರಿಗೆ ಪಿ ಡಿ ಎಸ್ ಸೀಮೆಎಣ್ಣೆಯನ್ನು ನೀಡುತ್ತಿರುವುದಿಲ್ಲ

ಆ) ಬಂದಿರುತ್ತದೆ

ಇ) ಮೇಲ್ಕಂಡ ತಾಲ್ಲೂಕುಗಳಲ್ಲಿ ಅನಿಲ ಸಂಪರ್ಕ (ಎಲ್ ಪಿ ಜಿ) ಹೊಂದಿಲ್ಲದ ಎಲ್ಲಾ ಕುಟುಂಬಗಳಿಗೂ ಬೆಳಕಿಗಾಗಿ ಸೀಮೆಎಣ್ಣೆ ಕೊಡಲಾಗುತ್ತಿದೆ ಮಲೆನಾಡಿನ ಹೆಚ್ಚುವರಿ ಸೀಮೆಎಣ್ಣೆ ಬೇಡಿಕೆಯನ್ನು ಅನುಸರಿಸಿ 5000 ಕೆಎಲ್ ಸೀಮೆಎಣ್ಣೆ ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ

ದೇವಸ್ಥಾನಗಳ ಜೀರ್ಣೋದ್ಧಾರ

199 (398) ಶ್ರೀ ಹಾಲಪ್ಪ ಹೆಚ್ (ಹೊಸನಗರ)

ಮಾನ್ಯ ಮೀನುಗಾರಿಕಾ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ಮುಜರಾಯಿ ದೇವಸ್ಥಾನಗಳ (ಜೀರ್ಣೋದ್ಧಾರ) ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು),

ಆ) ಆರಾಧನಾ ಸಮಿತಿಯ ಮುಖಾಂತರ ದೇವಸ್ಥಾನಗಳ (ಜೀರ್ಣೋದ್ಧಾರ) ಅಭಿವರದ್ಧಿಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು, (ತಾಲ್ಲೂಕುವಾರು ವಿವರ ನೀಡುವುದು)